ತಾರೀಖು 5ನೆ ಮಾರ್ಚ್ 1907.

ನಂ. 7594—ಸ್ಯಾನಿಟೆರಿ 15-06-8, ಸಮಸ್ತ ಜನರ ತಿಳಿವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಪ್ಲೇಗು ತಗುಲಿದ ಪ್ರದೇಶಗಳೆಂದು ಆಗಿಂದಾಗ್ಗೆ ಪ್ರಕಟಿಸಲ್ಪಟ್ಟಿದ್ದ ಮೈಸೂರು ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಸ್ಥಳಗಳು ಎರಡು ತಿಂಗಳ ವರೆಗೆ ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿವೆ.

ಸ್ಥಳ				ತಾಲ್ಲೂಕು
ಕೊಟ್ಟಗಾಲ	...	...	....	ಟಿ. ನರಸೀಪುರ.
ದೊಡ್ಡಪುರ	....	...	...	ಡಿಟೋ
ದೊಡ್ಡಬಾಗಿಲು	....	....	..	ಡಿಟೋ
ದಾಸನಕೊಪ್ಪಲು	...	...	...	ಡಿಟೋ
ಹೊನಹಳ್ಳಿ	...	...	...	ಡಿಟ್ಟೋ
ಉಂಡವಾಲು	...	...	...	ಡಿಟೋ
ದೊಡ್ಡಬ್ಯಾಡರಹಳ್ಳಿ	..	..	..	ಕೃಷ್ಣರಂಗಪಟ್ಟ.
ಹುಲ್ಲಿಪುರ	...	..	..	ಚಾಮರಾಜನಗರ.
ಗೋಪಾಲಪುರ	...	..	..	ಗುಂಡ್ಲುಪೇಟೆ.
ಹುಲ್ಲಮಾದನಹಳ್ಳಿ	...	..	..	ಡಿಟೋ
ಇರಸವಾಡಿ	...	..	...	ಡಿಟೋ
ಬಿಕ್ಕಟ್ಟಿ	...	..	..	ಡಿಟೋ
ಹಂಗಾಲ	...	..	..	ಡಿಟೋ
ಹರದಹಳ್ಳಿ	..	..	..	ಡಿಟೋ
ಕಳ್ಳಿಕೊಪ್ಪಲು	...	....	..	ಡಿಟೋ
ಅಂದಾಯಿನಗಾಡನ ಕೊಪ್ಪಲು	....	..	..	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು.
ಲೂಲಂದೇವನಹಳ್ಳಿ	...	..	..	ಎಡತೊರೆ.
ಅಂಬಲರೆ	..	..	..	ಹುಣಸೂರು.
ಮುಬ್ಬಹಳ್ಳಿ	..	..	...	ನಂಜನಗೂಡು.
ಹನಿಯಂಬಳ್ಳಿ	...	...	...	ಡಿಟೋ
ಹೊಳಿಪುರ	..	...	..	ಡಿಟೋ

ತಾರೀಖು 7ನೆ ಮಾರ್ಚ್ 1907.

ನಂ. 7841—ಸ್ಯಾನಿಟೆರಿ 166-06-1, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.			ತಾಲ್ಲೂಕು.
ದಾಸನಕೊಪ್ಪ	...	...	ಸಾಗರ.
ಹೊಸೂರು ಕ್ಯಾಂಪು	..	..	ಕುಂಸಿ ಸಬ್ ತಾಲ್ಲೂಕು.

ತಾರೀಖು 12ನೆ ಮಾರ್ಚ್ 1907.

ನಂ. 8161—ಸ್ಯಾನಿಟೆರಿ 99-06—6, ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕಿನ ಬೇಲೂರಿಗೆ ಶ್ರೀ ಚನ್ನಕೇಶವ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ತಲೆದೋರುವ ಸಂಭವವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸಸ್ ರೆಗ್ಯುಲೇಷನ್ಸಿನ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ಚಲಾಯಿಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚ್ 20ನೆ ತಾರೀಖಿನಿಂದ 1907ನೆಯ ವರ್ಷದ ಏಪ್ರಿಲ್ 5ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ತೆಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 2ನೆ ಮಾರ್ಚ್ 1907.

ನಂ. ಜೆ. 5416-ಜೆ. ಎಂ. 240-06-10, ಸನ್ 1894ನೆ ಇಸವಿಯ 11ನೆ ನಂಬರ್ ರೆಗ್ಯುಲೇಷನಿನ (ಹೊಸ ಕಲ್ಪನೆಗಳು ಮತ್ತು ನಕ್ಷೆಗಳ ರೆಗ್ಯುಲೇಷನುಗಳು) 8, 9, 10 ಮತ್ತು 11ನೆ ಪ್ರಕರಣಗಳನ್ನನುಸರಿಸಿ ಈ ಕೆಳಗೆ ನಮೂದಿಸುವ ಹೊಸ ಕಲ್ಪನೆಯ ವಿವರಣೆಯು ದಾಖಲಾಡಲ್ಪಟ್ಟಿದೆ. ಮತ್ತು ಇಷ್ಟ ವಿರುವವರು ಮೈಸೂರು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಸೆಕ್ರಿಟೆರಿಯವರಿಗೆ ಬರೆದುಕೊಂಡು ಬಂದು ರೂಪಾಯಿ ರುಸುಂ ಕೊಟ್ಟು ಆವರ ಕಚೇರಿಯಲ್ಲಿ ಆ ವಿವರಣೆಯನ್ನು ಪರೀಕ್ಷಿಸಿ ನೋಡಲು ಅಡ್ಡಿಯಿರುವುದಿಲ್ಲ.

ಇಂಗ್ಲೆಂಡ್ ದೇಶದ ಲಂಡನ್ ಕೌಂಟಿಯಲ್ಲಿ ವೆಸ್ಟ್ ಮಿನ್ಸ್ಟರಿನ ವಿಕ್ಟೋರಿಯಾ ಬೀದಿಯ 159ನೆ ಮನೆಯಲ್ಲಿರುವ ಶಿಲ್ಪ ಶಾಸ್ತ್ರಜ್ಞರಾದ ವಿಲಿಯಂ ಯಂಬರ್ಟ್ ಯವರಿಂದ ಮಾಡಲ್ಪಟ್ಟಿದ್ದು.

ಹತ್ತಿಯನ್ನು ಹಸನು ಮಾಡುವ ಯಂತ್ರಗಳಿಗೆ ಕಸಗಳಿಂದ ಅಥವಾ ಕೆಲಸಕ್ಕೆ ಬಾರದ ಕಸರುಗಳಿಂದ ಮತ್ತು ಇತರ ವಸ್ತುಗಳಿಂದ ಕೊಳೆ ಮುಂತಾದವುಗಳನ್ನು ಪ್ರತ್ಯೇಕಿಸುವ ಸಾಧನಗಳ ಅಭಿವೃದ್ಧಿ.